**ದಿನಾಂಕಃ 15.07.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ನಂ.1 ರ ಪರವಾಗಿ ಶ್ರೀ ಜಿ ಎಂ ಪಿ ವಕೀಲರಿಂದ.**

1 ನೇ ಪ್ರತಿವಾದಿಗೆ ವೈಯಕ್ತಿಕ ಆದಾಯ ಏನು ಇತ್ತು ಎಂಬ ಬಗ್ಗೆ ನಿಮಗೆ ಮಾಹಿತಿ ಇರುತ್ತದೆಯಾ ಅಂದರೆ ಸಾಕ್ಷಿ ಅವರು ಸಿವಿಲ್ ಇಂಜಿನಿಯರ್ ಇದ್ದರು ಅವರಿಗೆ ಆದಾಯ ಇತ್ತು ಎನ್ನುತ್ತಾರೆ. 1 ನೇ ಪ್ರತಿವಾದಿ ತನ್ನ ವೈಯಕ್ತಿಕ ಆದಾಯದಿಂದ ಯಾವ ಆಸ್ತಿ ಗಳಿಸಿರುತ್ತಾರೆಂಬ ಬಗ್ಗೆ ನಿಮಗೆ ಮಾಹಿತಿ ಇದೆಯಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು 1 ನೇ ಪ್ರತಿವಾದಿಯ ಸಹೋದರನನ್ನು ಮದುವೆಯಾಗುವ ಪೂರ್ವದಲ್ಲಿ ಅವರ ಕುಟುಂಬದಲ್ಲಿ ಏನೇನು ವ್ಯವಹಾರ ಆಗಿರುತ್ತದೆಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಅಂದರೆ ಸಾಕ್ಷಿ ನನ್ನ ಮಾವ ಏನೇನು ವ್ಯವಹಾರ ಆಗಿರುತ್ತದೆಂದು ನನಗೆ ಹೇಳಿರುತ್ತಾರೆ ಎನ್ನುತ್ತಾರೆ. ನಿಮ್ಮ ಮಾವ ಏನೇನು ವ್ಯವಹಾರ ಆಗಿರುತ್ತದೆಂದು ಹೇಳಿರುತ್ತಾರೆ ಅಂದರೆ ಸಾಕ್ಷಿ ಅವರು ಪೋಸ್ಟ ಮಾಸ್ಟರ್ ನೌಕರಿಯಲ್ಲಿ ಇದ್ದ ಬಗ್ಗೆ, ಮಕ್ಕಳನ್ನು ಓದಿಸಿದ ಬಗ್ಗೆ, ಮದುವೆ ಮಾಡಿದ ಬಗ್ಗೆ ಮತ್ತು ಅವರಿಗೆ ಇರುವ ಆಸ್ತಿಗಳ ಬಗ್ಗೆ ಹೇಳಿರುತ್ತಾರೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ 3 ನೇ ಆಸ್ತಿಯನ್ನು 1 ನೇ ಪ್ರತಿವಾದಿ ದಿನಾಂಕಃ 04.01.1985 ರಂದು ಖರೀದಿ ಮಾಡಿರುತ್ತಾರೆ ಅಂದರೆ ಸಾಕ್ಷಿ ಆ ಆಸ್ತಿಯನ್ನು ನನ್ನ ಮಾವ ಮಲ್ಲಪ್ಪ ಖರೀದಿ ಮಾಡಿರುತ್ತಾರೆ ಅದು ಪಿತ್ರಾರ್ಜಿತ ಆಸ್ತಿ ಇರುತ್ತದೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ 3 ನೇ ಆಸ್ತಿಯ ಕ್ರಯಪತ್ರವನ್ನು ನೋಡಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿನಾಂಕಃ 04.01.1985 ರ ಕ್ರಯಪತ್ರ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಅಂದರೆ ಸಾಕ್ಷಿ ನಮ್ಮ ಮಾವ ಖರೀದಿ

ಮಾಡಿರುತ್ತಾರೆ ಆದರೆ ಕ್ರಯಪತ್ರ 1 ನೇ ಪ್ರತಿವಾದಿಯ ಹೆಸರಲ್ಲಿ ಇರುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕಃ 04.01.1985 ರ ಕ್ರಯಪತ್ರದಲ್ಲಿ ಏನು ಬರೆಯಲಾಗಿದೆಂದು ನೀವು ಓದಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಹಾಕುವ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ ಹಾಕಿರುತ್ತೀರಾ ಅಂದರೆ ಸಾಕ್ಷಿ ನಮಗೆ ದೊರೆತ ದಾಖಲೆಗಳನ್ನು ಮಾತ್ರ ನೋಡಿ ಹಾಕಿರುತ್ತೇನೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ 4 ನೇ ಆಸ್ತಿಯನ್ನು 1 ನೇ ಪ್ರತಿವಾದಿ ದಿನಾಂಕಃ 15.06.1993 ರಂದು ಖರೀದಿ ಮಾಡಿರುತ್ತಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕಃ 15.06.1993 ರ ಕ್ರಯಪತ್ರವನ್ನು ನೋಡಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ 3 ಮತ್ತು 4 ನೇ ಆಸ್ತಿಗಳ ಪಂಚಾಯ್ತಿ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತವೆ ಅಂದರೆ ಸಾಕ್ಷಿ 2023 ರಲ್ಲಿ ಅವರ ಹೆಸರಿಗೆ ಬದಲಾವಣೆ ಆಗಿರುತ್ತವೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ 3 ಮತ್ತು 4 ನೇ ಆಸ್ತಿಗಳಿಗೆ ಸಂಬಂಧಪಟ್ಟ 2023 ರ ಹಿಂದಿನ ಪಂಚಾಯ್ತಿ ದಾಖಲೆಗಳನ್ನು ನೋಡಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ 3 ಮತ್ತು 4 ನೇ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವರೊಬ್ಬರೆ ಅವುಗಳನ್ನು ಅನುಭವಿಸಿಕೊಂಡು ಬಂದಿರುತ್ತಾರೆ ಅಂದರೆ ಸಾಕ್ಷಿ ಸದರಿ ಆಸ್ತಿಗಳು ನಮ್ಮ ಮಾವ ಮಲ್ಲಪ್ಪರವರ ಆಸ್ತಿಗಳು ಇರುತ್ತವೆ ಎನ್ನುತ್ತಾರೆ. ದಾವಾ ಎ ಶೆಡ್ಯೂಲ್ 3 ಮತ್ತು 4 ನೇ ಆಸ್ತಿಗಳ ಮೇಲೆ 1 ನೇ ಪ್ರತಿವಾದಿಯನ್ನು ಹೊರತುಪಡಿಸಿ ಮಲ್ಲಪ್ಪ ಮತ್ತು ಆತನ ಉಳಿದ ಮಕ್ಕಳು ಹಕ್ಕು ಚಲಾಯಿಸಿರುವುದಿಲ್ಲ ಅಂದರೆ ಸರಿಯಲ್ಲ.

ನಾನು 2 ನೇ ಮದುವೆಯಾದ ನಂತರ ನನ್ನ ಮೊದಲನೇ ಗಂಡನ ಕುಟುಂಬದವರ ಜೊತೆ ಸಂಪರ್ಕದಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ. ನಿಮ್ಮ ಗಂಡ ಹಾಗೂ ನಿಮ್ಮ ಅತ್ತೆ–ಮಾವನ ಚಿಕಿತ್ಸೆಯ ಬಗ್ಗೆ ನಿಮ್ಮ ಗಂಡನ ಕುಟುಂಬದಲ್ಲಿ ಏನು ಸಾಲ ಆಗಿರುತ್ತದೆಂಬ ಬಗ್ಗೆ ನಿಮಗೆ ಗೊತ್ತಾ ಅಂದರೆ ಸಾಕ್ಷಿ ಅವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆ ಯಾವುದೇ ಸಾಲ ಆಗಿರುವುದಿಲ್ಲ ಎನ್ನುತ್ತಾರೆ. ನನ್ನ ಮೊದಲ ಗಂಡನ ಕುಟುಂಬದಲ್ಲಿ ಇರುವ ಸಾಲದ ಬಗ್ಗೆ ನನಗೆ ಮಾಹಿತಿ ಇದ್ದರು ಸಹ ಸಾಲ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳ ಪೈಕಿ ನನ್ನ ಹಿಸ್ಸೆ ಸಂಬಂಧ ಈಗಾಗಲೇ ಪಂಚರ ಸಮಕ್ಷಮ ರೂ.3 ಲಕ್ಷ ಸಂದಾಯ ಆಗಿರುತ್ತದೆ ಅಂದರೆ ಸರಿಯಲ್ಲ. ದಾವಾ ಹಾಕುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಮನೆಗೆ ಭೇಟಿ ಕೊಟ್ಟಿರುತ್ತೀರಾ ಅಂದರೆ ಸಾಕ್ಷಿ ನನ್ನ ಅತ್ತೆ ಮರಣ ಹೊಂದಿದಾಗ ಮಾತ್ರ ಹೋಗಿ ಬಂದಿರುತ್ತೇನೆ ಎನ್ನುತ್ತಾರೆ. ನೀವು ಗಂಡನ ಮನೆಯಲ್ಲಿದ್ದಾಗ ಅವರ ಮನೆಯಲ್ಲಿದ್ದ ಚರಸ್ವತ್ತುಗಳ ಪಟ್ಟಿ ಮಾಡಿಕೊಂಡಿರುತ್ತೀರಾ ಅಂದರೆ ಸಾಕ್ಷಿ ಚರಸ್ವತ್ತುಗಳು ಇದ್ದವು ಆದರೆ ನಾನು ಪಟ್ಟಿ ಮಾಡಿಕೊಂಡಿರುವುದಿಲ್ಲ ಎನ್ನುತ್ತಾರೆ. ದಾವಾ ಬಿ ಶೆಡ್ಯೂಲ್ ಆಸ್ತಿಗಳು ಅಸ್ತಿತ್ವದಲ್ಲಿ ಇರುವ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ದಾಖಲೆ ಕೊಟ್ಟಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಬಿ ಶೆಡ್ಯೂಲ್ ಆಸ್ತಿಗಳ ಗುರುತು ಮತ್ತು ಮೌಲ್ಯದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಬಿ ಶೆಡ್ಯೂಲ್ ಆಸ್ತಿಗಳನ್ನು ಕಲ್ಪನೆ ಮಾಡಿಕೊಂಡು ದಾವಾದಲ್ಲಿ ಸೇರಿಸಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಎ

ಶೆಡ್ಯೂಲ್ 3 ಮತ್ತು 4 ನೇ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ 1,2 ಮತ್ತು 5 ರಿಂದ 7 ನೇ ಆಸ್ತಿಗಳ ಬಗ್ಗೆ ಈಗಾಗಲೇ ಹಿಸ್ಸೆ ಆಗಿದ್ದು ನನ್ನ ಮತ್ತು ಪ್ರತಿವಾದಿಗಳ ಮಧ್ಯೆ ಅವಿಭಕ್ತ ಕುಟುಂಬ ಅಸ್ತಿತ್ವದಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ 2 ನೇ ಗಂಡನ ಪ್ರಚೋದನೆಗೆ ಒಳಗಾಗಿ ಅಕ್ರಮಲಾಭ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

**ಪಾಟಿ ಸವಾಲುಃ** 2 ನೇ ಪ್ರತಿವಾದಿ ಪರ ವಕೀಲರು 1 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.